# ಆವ ಕುಲವಾದರೇನು ಆವನಾದರೇನು

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 53.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 110.
3. **Ref.:** Samagra Dasa Sahitya, Samputa 3.2 published by Kannada & Culture Dept, Govt of Karnataka, Bengaluru, page No. 98.
4. **Ref.:** Shri Purandara Dasara Sahitya Part – 5, Loka Neeti, edited by Shri Betageri Krishna Sharma and Shri Bengeri Huchha Rayaru, page No. 57.
5. **Note:** Lyrics mentioned without highlights are as per Ref. 1. The wordings in Ref. 2 are same as in Ref. 1. The wordings in Ref. 3 are slightly different and are given separately in green highlights. The wordings in Ref. 4 are same as in Ref. 3 with few differences which are not considered here.
6. **Note:** Ankita is different in both the books. We have considered Ref. 1 as standard and taken that Ankita for listing.
7. **Note:** Singer has followed lyrics as in Ref. 1.

ರಾಗ: ರೇಗುಪ್ತಿ ತಾಳ: ಅಟ್ಟ

ಆವ ಕುಲವಾದರೇನು ಆವನಾದರೇನು, ಆತ್ಮ
ಭಾವವರಿತ ಮೇಲೆ || ಪ ||,

ಹಸಿ ಕಬ್ಬು ಡೊಂಕಿರಲು ಅದರ
ರಸ ತಾನು ಡೊಂಕೇನೊ
ವಿಷಯಾಸೆಗಳ ಬಿಟ್ಟು
ಹಸನಾದ ಗುರುಭಕ್ತಿ ಮಾಡೋ || ೧ ||

ನಾನಾ ವರ್ಣದ ಆಕಳು ಅದು
ನಾನಾ ವರ್ಣದ ಕ್ಷೀರವೇನೋ
ಹೀನ ಕರ್ಮಗಳನ್ನು ಬಿಟ್ಟು ಹಿಗ್ಗಿ

ಜ್ಞಾನ ಒಲಿಸೋ || ೨ ||

ಕುಲದ ಮೇಲೆ ಹೋಗಬೇಡ ಮನುಜಾ
ಕುಲವಿಲ್ಲ ಜ್ಞಾನಿಗಳಿಗೆ
ವರದ ಪುರಂದರವಿಠಲನ ಪಾದವ
ಸೇರಿ ಮುಕ್ತನಾಗೋ || ೩ ||

**Note:** Below given lyrics are as per Ref. 3.

ರಾಗ: ರೇಗುಪ್ತಿ ತಾಳ: ಅಟ

ಆವ ಕುಲವಾದರೇನು || ಪ ||
ಭಾವದ ಎಲ್ಲಾನ ತಿಳಿದವನಿಗೆ ಮತ್ತೇ || ಅಪ ||

ಹಸಿ ಕಬ್ಬು ಡೊಂಕು ಇರಲು – ಅದರೊಳಗಿದ್ದ
ರಸ ತಾನು ಡೊಂಕೇನಲೊ – ಮರುಳೆ
ವಿಷಯ ಭಾವನೆ ಬಿಟ್ಟು ನೀ ಹೋಗಿ ಗುರುಗಳ
ಹಸನಾಗಿ ಕೇಳು ಕಾಣೋ – ಮನುಜಾ || 1 ||

ನಾನಾವರ್ಣದ ಆಕಳ – ಕ್ಷೀರದಲಿ
ನಾನಾವರ್ಣಗಳಹುದೆ – ಮನುಜಾ
ಹೀನ ಭಾವನೆಗಳನಿಂಬಿಟ್ಟು ನೀ ಪೋಗಿ
ಜ್ಞಾನಿಗಳ ಕೇಳು ಕಾಣೋ – ಮನುಜಾ || 2 ||

ಶರಧಿಯೊಳ ತೆರೆನೊರೆಗಳಾ – ಪರಿಯಂತೆ
ಶರೀರವಲ್ಲದೆ ಬೇರಿಹುದೇ ?
ವರ ಪುರಂದರ ವಿಠಲನ ಸ್ಮರಿಸುತಿರಲು ನಿನಗೆ
ಸಿರಿಯನು ಮುಕುತಿಯಹುದು – ಮನುಜಾ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಕುಲ, ಮತ, ಜಾತಿಗಳು ಮುಖ್ಯವಲ್ಲ; ಭಕ್ತಿಯ ಭಾವ, ಜ್ಞಾನ ಇವೇ ಮುಖ್ಯ. ಯಾವ ಕುಲದವರೇ ಆಗಲಿ ಭಕ್ತಿ, ಜ್ಞಾನಗಳಿದ್ದರೆ ಅವರು ಮಾನ್ಯರೇ. ಅವಕ್ಕೆ ಕುಲ ಕಾರಣವಾಗುವುದಿಲ್ಲ. ವಿಷಯದ ಆಸೆ ಬಿಡುವುದು, ಗುರುಭಕ್ತಿ ಮಾಡುವುದು, ಕೆಟ್ಟ ಕೆಲಸಗಳನ್ನು ಮಾಡದಿರುವುದು, ಜ್ಞಾನವನ್ನು ಪಡೆದುಕೊಳ್ಳುವುದು ಇವು ಅಧ್ಯಾತ್ಮದಲ್ಲಿ ಆಸಕ್ತರಾದವರಿಗೆ ಮುಖ್ಯ.

**Classification:** Keerthane
**Ankita:** varada purandara vittala
**Location:** NA
**Category:** Loka Neeti, Jeevanoddhara
**Sub-Category:** kula, rasa, vishaya, bhakti, govu, halu, karma, jnana, olume, nara, mukti, Samudra, deha,
**Pravachana:** NA
**Explanation:** NA